ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELAGAVI-590002

ದೂರವಾಣಿ / Telephone: 0831-2407201, 0831-2407206, 0831-2431640
ಫ್ಯಾಕ್ಸ್/Fax: 0831-2429662
e-mail: ceozpbelgaum@yahoo.com, dsdevbgm@gmail.com

ಕ್ರಸಂ:ಜಿಪ/ಅಭಿವೃದ್ಧಿ/ಪಂಅಅ/ವಿವ- 107 /2014-15 ಬೆಳಗಾವಿ,ದಿನಾಂಕ:13-2-2015.

# ಕಚೇರಿ ಆದೇಶ

ವಿಷಯ: ಗ್ರೇಡ-1 ಗ್ರಾಮ ಪಂಚಾಯತ ಕಾರ್ಯದರ್ಶಿಗಳ ವೃಂದದ ನೌಕರರಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಬಡ್ತಿ ನೀಡುವ ಕುರಿತು.

ಓದಲಾಗಿದೆ:1)ಸರ್ಕಾರದ ಅಧಿಸೂಚನೆ ಸಂ:ಗ್ರಾಅಪ/167/ಗ್ರಾಪಂಕಾ/2011,ದಿ:24-8-2011.
2)ಸರ್ಕಾರದ ಪತ್ರ ಸಂ:ಗ್ರಾಅಪ/222/ಪಬವ/2013/ಬೆಂಗಳೂರು,ದಿ:1-7-2013 ಹಾಗೂ 11-7-2013.
3)ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್/4/ಎಸ್.ಎಸ್.ಆರ್/2009/ ಬೆಂಗಳೂರು, ದಿ:23-12-2011.
4)ಸರ್ಕಾರದ ಅಧಿಸೂಚನೆ ಸಂ:ಗ್ರಾಅಪ/299/ಪಬವ/2013/ಬೆಂಗಳೂರು, ದಿನಾಂಕ:20-2-2014.
5)ಈ ಕಾರ್ಯಾಲಯದ ಆದೇಶ ಸಂ:ಜಿಪ/ಅಭಿವೃದ್ಧಿ/ಗ್ರಾಪಕಾ/ಸಿಬ್ಬಂದಿ/ ವಿವ-15/2014-15, ದಿನಾಂಕ:18-12-2014.
6)ಈ ಕಾರ್ಯಾಲಯದ ಪತ್ರ ಸಮಸಂಖ್ಯೆ ದಿ:31-12-2014.
7)ದಿನಾಂಕ:13 -2-2015 ರಂದು ಜರುಗಿದ ಡಿ.ಪಿ.ಸಿ. ಸಮೀತಿ ಸಭೆಯ ನಡುವಳಿಕೆ.

ಮೇಲೆ ಓದಲಾದ ಕ್ರಸಂ:(1)ರ ಸರ್ಕಾರದ ಅಧಿಸೂಚನೆಯಲ್ಲಿ ತಿಳಿಸಿದಂತೆ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ದಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ನೇಮಕಾತಿ) ನಿಯಮಗಳು 1962ಕ್ಕೆ ದಿ:4-3-2010ರ ಅಧಿಸೂಚ ಸಂ:ಗ್ರಾಅಪ/316/ಗ್ರಾಪಂಕಾ/2009ರಲ್ಲಿ ಮಾಡಿರುವ ತಿದ್ದುಪಡಿಯನ್ವಯ ಪಂಚಾಯತ ಅಭಿವೃದ್ಧಿ ಅಧಿಕಾರಿ ವೃಂದದ ಹುದ್ದೆಗಳಿಗೆ ನಿಗದಿಪಡಿಸಿರುವ ನೇಮಕಾತಿ ವಿಧಾನದಲ್ಲಿ ಶೇ 67 ರಷ್ಟು ನೇಮಕಾತಿ ಮೂಲಕ ಮತ್ತು ಶೇ 33% ರಷ್ಟನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಆಸ್ಪದ ಕಲ್ಪಿಸಿರುತ್ತಾರೆ. ದಿ:27-4-1978ರ ಸರ್ಕಾರಿ ಆದೇಶ ಸಂ:ಡಿಪಿಎಆರ್/29/ಎಸ್.ಬಿ.ಸಿ/77ರ ಪ್ರಕಾರ ಮುಂಬಡ್ತಿ ಮೀಸಲಾತಿ ಅನ್ವಯವಾಗುದಿಲ್ಲವೆಂದು ಸರ್ಕಾರದ ಪತ್ರದಲ್ಲಿ ತಿಳಿಸಲಾಗಿದೆ.

ಓದಲಾದ ಕ್ರಸಂ:(2)ರ ಪತ್ರದಲ್ಲಿ ಮುಂಬಡ್ತಿ ಕೋಟಾದಲ್ಲಿ ಖಾಲಿಯಾಗಿರುವ ಹುದ್ದೆಗಳನ್ನು ಜಿಲ್ಲಾ ಪಂಚಾಯತ ಹಂತದಲ್ಲಿ ಭರ್ತಿ ಮಾಡಲು ಅನುಮತಿಸಲಾಗಿರುತ್ತದೆ. ಓದಲಾದ ಕ್ರಸಂ:(3)ರಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಅಕೌಂಟ್ಸ್ ಹೈಯರ, ಸಿ.ಡಿ.ಪಿ- ಭಾಗ-1, ಸಿ.ಡಿ.ಪಿ. ಭಾಗ-2, ಜನರಲ್ ಲಾ ಭಾಗ-1, ಜನರಲ್ ಲಾ ಭಾಗ-2 ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಲಾಗಿರುತ್ತದೆ. ಓದಲಾದ ಕ್ರಸಂ:(4)ರ ಆದೇಶ ಜಾರಿಗೆ ಬಂದ ಒಂದು ವರ್ಷದ ಅವಧಿಯವರೆಗೆ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ವ್ಯಕ್ತಿ ಲಭ್ಯವಿಲ್ಲದಿದ್ದ ಪಕ್ಷದಲ್ಲಿ 2 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮುಂಬಡ್ತಿಗಾಗಿ ಪರಿಗಣಿಸಬಹುದಾಗಿದೆ ಅಂತಾ ಆದೇಶದಲ್ಲಿ ಸ್ಪಷ್ಟೀಕರಿಸಲಾಗಿದೆ.

ಮೇಲೆ ಓದಲಾದ ಕ್ರಸಂ:(5)ರ ಆದೇಶದಲ್ಲಿ ದಿ:1-1-2014ಕ್ಕೆ ಇದ್ದಂತೆ ಗ್ರೇಡ-1 ಹುದ್ದೆಯಲ್ಲಿರುವ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ದಿ:30-11-2014 ರೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶವನ್ನು ಸಹ ನೀಡಲಾಗಿದೆ. ಒಟ್ಟು 5 ಅರ್ಜಿಗಳು ಆಕ್ಷೇಪಣೆಗೆ ಬಂದಿದ್ದು, ದಿ:2-12-2014 ರಂದು ಆಕ್ಷೇಪಣೆ ಅರ್ಜಿಗಳನ್ನು ದಾಖಲೆಗಳ ಪ್ರಕಾರ ಪರಿಶೀಲಿಸಿ ಸರಿಪಡಿಸಲಾಗಿದೆ. ಹಾಗೂ ಅಂತಿಮ ಪಟ್ಟಿಯನ್ನು ದಿ:18-12-2014 ರಂದು ಪ್ರಕಟಿಸಲಾಗಿದೆ.

ಓದಲಾದ ಕ್ರಸಂ:(6)ರಲ್ಲಿ ಗ್ರೇಡ-1 ಕಾರ್ಯದರ್ಶಿ ಹುದ್ದೆಯಿಂದ ಪಂಚಾಯತ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಅರ್ಹವಿದ್ದ ಸಿಬ್ಬಂದಿಗಳ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಕಾರ್ಯನಿರ್ವಾಹಕ ಅಧಿಕಾರಿಗಳು ಮಾಹಿತಿ ಸಲ್ಲಿಸಿದ್ದು, ಮಾಹಿತಿಯನ್ನು ಪರಿಶೀಲನೆ ಮಾಡಿದ ನಂತರ ಇಲಾಖಾ ವಿಚಾರಣೆ ಮತ್ತು ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸಾಗದೇ ಇರುವ 11 ಗ್ರೇಡ-1 ಕಾರ್ಯದರ್ಶಿಗಳನ್ನು ಕೈಬಿಟ್ಟು ಅರ್ಹವಿದ್ದ 20 ಗ್ರೇಡ-1 ಕಾರ್ಯದರ್ಶಿಗಳಿಗೆ ಪದೋನ್ನತಿ ನೀಡುವುದು ಅವಶ್ಯವಿರುತ್ತದೆ. ಡಿಪಿಸಿ ಯನ್ನು ಶಿಸ್ತು ಪ್ರಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಉಪ ಕಾರ್ಯದರ್ಶಿ (ಅಭಿವೃದ್ಧಿ), ಸಹಾಯಕ ಕಾರ್ಯದರ್ಶಿ (ಅಭಿವೃದ್ಧಿ) ಇವರನ್ನೊಳಗೊಂಡ ಸಮೀತಿಯು 20 ಗ್ರೇಡ-1 ಕಾರ್ಯದರ್ಶಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಮಾಡಿದ ಪ್ರಕಾರ ಅರ್ಹರಿದ್ದ ಈ ಕೆಳಕಂಡ ಗ್ರೇಡ-1 ಗ್ರಾಮ ಪಂಚಾಯತ ಕಾರ್ಯದರ್ಶಿಗಳನ್ನು ಕರ್ನಾಟಕ ನಾಗರೀಕ ಸೇವಾ 1958 ನಿಯಮ 42 ರನ್ವಯ ವೇತನ ಶ್ರೇಣಿ 20000-500-21000-600-24600-700-28800-800-33600-900-36300 ರಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ವೃಂದಕ್ಕೆ ಬಡ್ತಿ ನೀಡಿ ಅವರ ಹೆಸರಿನ ಮುಂದೆ ಅಂಕಣ (5) ರಲ್ಲಿ ನಮೂದಿಸಿದ ಗ್ರಾಮ ಪಂಚಾಯತಕ್ಕೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಅನಂ | ಜೇಷ್ಠತಾ ಪಟ್ಟಿ ಸಂ | ಗ್ರೇಡ-1 ಗ್ರಾಮ ಪಂಚಾಯತ ಕಾರ್ಯದರ್ಶಿಯ ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತದ ಹೆಸರು | ಪಂಚಾಯತ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಬಡ್ತಿ ನೀಡಿ ನಿಯುಕ್ತಿಗೊಳಿಸಿದ ಗ್ರಾಮ ಪಂಚಾಯತದ ಹೆಸರು |
|---|---|---|---|---|
| 1 | 2 | 3 | 4 | 5 |
| 1 | 165 | ಶ್ರೀ ಎಸ್.ಬಿ.ಮುರಾರಿ | ಗ್ರಾ.ಪಂ. ಕಡೋಲಿ ತಾ:ಬೆಳಗಾವಿ | ಗ್ರಾ.ಪಂ.ಅಂಕಲಗಿ ತಾ:ಬೆಳಗಾವಿ |
| 2 | 303 | ಶ್ರೀ ವಿ.ಎಂ. ಸಂದ್ರಿಮನಿ | ಗ್ರಾ.ಪಂ. ಕಕಮರಿ ತಾ:ಅಥಣಿ | ಗ್ರಾ.ಪಂ.ಶೇಗುಣಶಿ ತಾ:ಅಥಣಿ |
| 3 | 306 | ಶ್ರೀ ಪಿ.ಆರ್. ಚೊಳಚಗುಡ್ಡ | ಗ್ರಾ.ಪಂ. ಕೆ.ಚಂದರಗಿ ತಾ:ರಾಮದುರ್ಗ | ಗ್ರಾ.ಪಂ.ಹಲಗತ್ತಿ ತಾ:ರಾಮದುರ್ಗ |
| 4 | 308 | ಶ್ರೀಮತಿ ಎ.ಎನ್. ಗೋಪಾಗೋಳ | ಗ್ರಾ.ಪಂ.ಪಟ್ಟಣಕುಡಿ ತಾ:ಚಿಕ್ಕೋಡಿ | ಗ್ರಾ.ಪಂ.ನೇಜ ತಾ:ಚಿಕ್ಕೋಡಿ |
| 5 | 309 | ಶ್ರೀ ಕೆ.ಎನ್. ವಾಗತ್ತಿ | ಗ್ರಾ.ಪಂ. ಮನಿಹಾಳ ತಾ:ರಾಮದುರ್ಗ | ಗ್ರಾ.ಪಂ.ಇಡಗಲ್ ತಾ:ರಾಮದುರ್ಗ |
| 6 | 311 | ಶ್ರೀ ಎ.ಐ. ಕರ್ಕಿ | ಗ್ರಾ.ಪಂ.ಉಚಗಾಂವ ತಾ:ಬೆಳಗಾವಿ | ಗ್ರಾ.ಪಂ.ಸಂತಿಬಸ್ತವಾಡ ತಾ:ಬೆಳಗಾವಿ |
| 7 | 312 | ಶ್ರೀ ಯು.ವ್ಹಿ. ಗೋಕ್ರಾಳ | ಗ್ರಾ.ಪಂ. ಹುದಲಿ ತಾ:ಬೆಳಗಾವಿ | ಗ್ರಾ.ಪಂ.ಕೇದನೂರ ತಾ:ಬೆಳಗಾವಿ |
| 8 | 315 | ಶ್ರೀ ಎಂ.ಎಸ್. ಪಾಟೀಲ | ಗ್ರಾ.ಪಂ.ಹೊಸಪೇಟೆ ತಾ:ಹುಕ್ಕೇರಿ | ಗ್ರಾ.ಪಂ.ಅಂಕಲೆ ತಾ:ಹುಕ್ಕೇರಿ |
| 9 | 316 | ಶ್ರೀ ಎಚ್.ಎಸ್. ದೇಸಾಯಿ | ಗ್ರಾ.ಪಂ.ಶಿವಾಪೂರ(ಹ) ತಾ:ಗೋಕಾಕ | ಗ್ರಾ.ಪಂ. ಬೆಣಚಿನಮರಡಿ (ಉ) ತಾ:ಗೋಕಾಕ |

**ಪ್ರತಿಯನ್ನು ಆದರಗಳೊಂದಿಗೆ ಸಲ್ಲಿಸಲಾಗಿದೆ:**

1) ಮಹಾಲೇಖಾಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಮಾಹಿತಿ ಕುರಿತು ಆದರಗಳೊಂದಿಗೆ ಸಲ್ಲಿಸಿದೆ.
2) ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿ ಕುರಿತು ಆದರಗಳೊಂದಿಗೆ ಸಲ್ಲಿಸಿದೆ.
3) ನಿರ್ದೇಶಕರು, ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಪಂಚಾಯತ ರಾಜ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿ ಕುರಿತು ಆದರಗಳೊಂದಿಗೆ ಸಲ್ಲಿಸಿದೆ.

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1) ಉಪ ಕಾರ್ಯದರ್ಶಿಗಳು (ಅಭಿವೃದ್ಧಿ), ಜಿಲ್ಲಾ ಪಂಚಾಯತ ಬೆಳಗಾವಿ
2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ, ಗೋಕಾಕ, ಹುಕ್ಕೇರಿ, ರಾಯಬಾಗ, ಚಿಕ್ಕೋಡಿ.
3) ಸಂಬಂಧಿಸಿದ ಸಿಬ್ಬಂದಿಗಳಿಗೆ.
4) ರಕ್ಷಿತ ಕಡತಕ್ಕೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

Lg/Promotion order Grade-1 to PDO.doc